# ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು-560 001

==================================================================

ದಿನಾಂಕ 23.10.2013ರಂದು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಮಧ್ಯಾಹ್ನ 4.00 ಗಂಟೆಗೆ ನಡೆದ 197ನೇ ನಿರ್ದೇಶಕ ಮಂಡಳಿಯ ಸಭಾ ನಡವಳಿಗಳು

**ಹಾಜರಾತಿ:**

1. ಶ್ರೀ ಹೆಚ್. ಆಂಜನೇಯ — ಅಧ್ಯಕ್ಷರು
   ಮಾನ್ಯ ಅಧ್ಯಕ್ಷರು
   ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

2. ಡಾ: ಇ. ವೆಂಕಟಯ್ಯ, ಭಾ.ಆ.ಸೇ., — ಸದಸ್ಯರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಸಮಾಜ ಕಲ್ಯಾಣ ಇಲಾಖೆ

3. ಶ್ರೀ ನಾಗರಾಜ ಚವ್ಹಾಣ್ — ಸದಸ್ಯರು
   ವ್ಯವಸ್ಥಾಪಕ ನಿರ್ದೇಶಕರು
   ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ

4. ಶ್ರೀ ರಾಮಚಂದ್ರಯ್ಯ — ಸದಸ್ಯರು
   ಉಪ ಕಾರ್ಯದರ್ಶಿಗಳು (ಕಲ್ಯಾಣ)
   ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ

5. ಶ್ರೀಮತಿ ಎಲ್. ರಾಜೇಶ್ವರಿ — ಸದಸ್ಯರು
   ಉಪ ಕಾರ್ಯದರ್ಶಿಗಳು
   ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರ

6. ಡಾ. ಆರ್. ರಾಜು, ಭಾ.ಅ.ಸೇ., — ಸದಸ್ಯ ಕಾರ್ಯದರ್ಶಿಗಳು
   ವ್ಯವಸ್ಥಾಪಕ ನಿರ್ದೇಶಕರು
   ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

**ಗೈರು ಹಾಜರಿ:**

1. ಶ್ರೀ ಎಸ್.ಎನ್. ಜಯರಾಂ, ಭಾ.ಆ.ಸೇ.,
   ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ,

2. ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
   ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತ
   ಭಾರತ ಸರ್ಕಾರ, ನವದೆಹಲಿ

3. ನಿರ್ದೇಶಕರು
   ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ
   ಭಾರತ ಸರ್ಕಾರ, ನವದೆಹಲಿ

Draft 24/X/2013

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ನಿಗಮದ ಮಾನ್ಯ ಅಧ್ಯಕ್ಷರು ಹಾಗೂ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಇತರೆ ಹಾಜರಿದ್ದ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯಲ್ಲಿ (quorum) ಇರುವುದನ್ನು ಖಾತ್ರಿಪಡಿಸಿ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು. ಅಂತೆಯೇ, 197ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ನಿಗಮದ ಅಧ್ಯಕ್ಷರನ್ನು ಕೋರಿದರು. ಅಂತೆಯೇ ನಡೆದ ಸಭೆಯ ವಿಷಯವಾರು ನಡವಳಿ.

**ವಿಷಯ ಸಂಖ್ಯೆ: 01:** 196ನೇ ನಿರ್ದೇಶಕರ ಮಂಡಳಿ ನಡವಳಿ ಅಂಗೀಕರಿಸುವ ಕುರಿತು.

ದಿನಾಂಕ:27.09.2013ರಂದು ನಡೆದ 196ನೇ ನಿರ್ದೇಶಕರ ಮಂಡಳಿಯು ತೆಗೆದುಕೊಂಡ ವಿಷಯವಾರು ತೀರ್ಮಾನದ ನಡವಳಿಯನ್ನು ಸಭೆಯು ಯಥಾವತ್ತಾಗಿ ಅಂಗೀಕರಿಸಿತು. ಮುಂದುವರೆದು, 196ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಂತೆ ಕೈಗೊಂಡ ಕ್ರಮದ ಬಗ್ಗೆ ತಯಾರಿಸಿದ ಅನುಪಾಲನಾ ವರದಿಯನ್ನು ಪರಾಂಭರಿಸಲಾಯಿತು.

**ವಿಷಯ ಸಂಖ್ಯೆ:02:** ನಿಗಮದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಮೋದನೆ ನೀಡುವ ಬಗ್ಗೆ.

ನಿಗಮದ 189ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದಿಸಿದ ವೃಂದ ಮತ್ತು ನೇಮಕಾತಿ ನಿಯಮವನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಮಂಡಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪತ್ರ ಸಂಖ್ಯೆ:ಸಕಇ/154/ಎಸ್‌ಡಿಸಿ/2012 ದಿನಾಂಕ 21.08.2013ರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ಒಪ್ಪಿ ನಿಗಮಕ್ಕೆ ಕಳುಹಿಸಿ ಮುಂದಿನ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ತಿಳಿಸಿತ್ತು. ಅಂತೆಯೇ, ನಿಗಮದ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಆಡಳಿತ ಮಂಡಳಿಯು ಸಂಪೂರ್ಣವಾಗಿ ಅವಲೋಕನ ಮಾಡಿ ಚರ್ಚಿಸಿತು. ಪೂರ್ಣ ಚರ್ಚೆಯ ನಂತರ ಸದರಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಕೆಳಕಂಡ ಒಂದು ಬದಲಾವಣೆಯೊಂದಿಗೆ ಯಥಾವತ್ತಾಗಿ ಅನುಮೋದಿಸಿ, ಕೂಡಲೇ ಜಾರಿಗೆ ಬರುವಂತೆ ನಿಗಮಕ್ಕೆ ಅಳವಡಿಸಿಕೊಳ್ಳಲು ಒಪ್ಪಿತು [illegible]

"Schedule-II, Statement-I, Sl. No.7. District Manager/Asst. General Manager"

ಈ ಹುದ್ದೆಯ ನೇರನೇಮಕಾತಿಯಲ್ಲಿ ನಿಗದಿಪಡಿಸಲಾಗಿದ್ದ ಎರಡು ವರ್ಷಗಳ work experience ಅರ್ಹತೆಯನ್ನು ಕೈಬಿಡುವುದು.

**ವಿಷಯ ಸಂಖ್ಯೆ:03:** ಗಂಗಾಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಬಾಕಿ ಉಳಿದ 4608 ಕೊಳವೆಬಾವಿಗಳನ್ನು ಪರಿಷ್ಕೃತ ಘಟಕ ವೆಚ್ಚದಂತೆ ಕೊರೆಯುವ ಬಗ್ಗೆ.

ಈ ವಿಷಯವನ್ನು ಸವಿಸ್ತಾರವಾಗಿ ಚರ್ಚಿಸಿದ ಆಡಳಿತ ಮಂಡಳಿಯು ಈ ಕೆಳಕಂಡಂತಹ ತೀರ್ಮಾನಗಳನ್ನು ಮಾಡಿತು.

1) 2008-09ನೇ ಸಾಲಿನಿಂದ 2011-12ನೇ ಸಾಲಿನ ವರೆವಿಗೆ ಕೊರೆಯಲು ಬಾಕಿ ಆಗಿರುವ 4608 ಕೊಳವೆಬಾವಿಗಳನ್ನು 2012-13ನೇ ಸಾಲಿನಲ್ಲಿ ಅಂತಿಮಗೊಳಿಸಲಾಗಿರುವ ಟೆಂಡರ್ ದರಗಳ ಆಧಾರದಂತೆ 2013-14ನೇ ಸಾಲಿನಲ್ಲಿ ಕೊರೆಯಲು ತೀರ್ಮಾನಿಸಲಾಯಿತು. ಹಾಗೂ ವ್ಯತ್ಯಾಸದ ಮೊತ್ತವನ್ನು ನಿಗಮದಲ್ಲಿ ಉಳಿತಾಯವಾಗಿರುವ ಹಾಗೂ 2013-14ನೇ ಸಾಲಿನ ಆಯವ್ಯಯದಲ್ಲಿ ಇರುವ ಸಂಪನ್ಮೂಲಗಳಿಂದ ಹೊಂದಾಣಿಕೆ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.
2) ನಿಗಮದ ವತಿಯಿಂದ ಕಾರ್ಯಾದೇಶ ಪಡೆದು ಕೊಳವೆಬಾವಿ ಕೊರೆಯದೇ ಬಾಕಿ ಮಾಡಿರುವ ಗುತ್ತಿಗೆದಾರರುಗಳ ಮೇಲೆ ಟೆಂಡರ್ ನಿಯಮಾವಳಿಗಳಂತೆ ಹಾಗೂ ಚಾಲ್ತಿ ಕಾನೂನಿನನ್ವಯ ಶಿಸ್ತು ಕ್ರಮಕೈಗೊಳ್ಳುವುದು.

Draft 24/X/2013

3) ನಿಗದಿತ ಗುರಿಯಂತೆ ಕೊರೆಯಬೇಕಾಗಿದ್ದ ಕೊಳವೆಬಾವಿಗಳಿಗೆ ಕಾರ್ಯಾದೇಶ ನೀಡುವಲ್ಲಿ ವಿಫಲರಾಗಿರುವ ಹಾಗೂ ಕಾರ್ಯಾದೇಶ ನೀಡಿಯೂ ಕೆಲಸವನ್ನು ಸಮರ್ಪಕವಾಗಿ ಪೂರ್ಣಗೊಳಿಸುವಲ್ಲಿ ನಿರ್ವಹಣೆ ಮಾಡಲು ವಿಫಲರಾಗಿರುವ ನಿಗಮದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವುದು.

**ವಿಷಯ ಸಂಖ್ಯೆ:04:** ವೈದ್ಯಕೀಯ ಕಾರಣದ ಮೇಲೆ ನಿವೃತ್ತಿಗೊಂಡ ಶ್ರೀ ಶಾಮರಾಯ, ದಲಾಯಿತರು ಇವರ ಮಗ ಶ್ರೀ ರೇವಣಸಿದ್ದಪ್ಪ ರವರಿಗೆ ಅನುಕಂಪ ಆಧಾರದ ಮೇಲೆ ನಿಗಮದಲ್ಲಿ ನೌಕರಿ ನೀಡುವ ಬಗ್ಗೆ.

ಈ ವಿಷಯದಲ್ಲಿ ಆಡಳಿತ ಮಂಡಳಿಯು ಲಭ್ಯವಿದ್ದ ಎಲ್ಲಾ ದಾಖಲಾತಿಗಳನ್ನು ಹಾಗೂ ದಿನಾಂಕ 21.10.2013ರಂದು ಉಪ ಪ್ರಧಾನ ವ್ಯವಸ್ಥಾಪಕರು, ಬೆಂಗಳೂರು ವಿಭಾಗ, ಪ್ರಧಾನ ವ್ಯವಸ್ಥಾಪಕರು (ಸಿ:ಆ) ತಮ್ಮ ಸಿಬ್ಬಂದಿಗಳೊಳಗೂಡಿ ಶ್ರೀಯುತ ಶಾಮರಾಯ ರವರ ಆರೋಗ್ಯ ಸ್ಥಿತಿಯನ್ನು ಮುಕ್ತ ಪರಿಶೀಲಿಸಿ ನೀಡಿದ ವರದಿಯನ್ನು, ಛಾಯಾಚಿತ್ರಗಳನ್ನು ಪರಿಶೀಲಿಸಿದ ಆಡಳಿತ ಮಂಡಳಿಯು ಶ್ರೀಯುತ ಶಾಮರಾಯ, ಇವರ ಮಗ ಶ್ರೀಯುತ ರೇವಣಸಿದ್ದಪ್ಪ ಇವರನ್ನು ಅನುಕಂಪದ ಆಧಾರದ ಮೇಲೆ ನಿಗಮದಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ನೇಮಕ ಮಾಡಲು ಒಪ್ಪಿಗೆ ನೀಡಿತು.

**ವಿಷಯ ಸಂಖ್ಯೆ:05 (ಅ):** ಶ್ರೀ ಟಿ. ವಿಶ್ವನಾಥ್ (ಸೇವೆಯಿಂದ ವಜಾಗೊಳಿಸಿರುವ) ಜಿಲ್ಲಾ ವ್ಯವಸ್ಥಾಪಕರು, ಇವರನ್ನು ನ್ಯಾಯಾಲಯದ ತೀರ್ಪಿನ ಮೇರೆಗೆ ಸೇವೆಗೆ ಪುನರ್ ನೇಮಿಸಿಕೊಳ್ಳುವ ಬಗ್ಗೆ.

ಈ ವಿಷಯವನ್ನು ಪರಿಪೂರ್ಣವಾಗಿ ಅವಲೋಕನ ಮಾಡಿ ಚರ್ಚಿಸಿ ಈ ಕೆಳಕಂಡಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಶ್ರೀಯುತ ಟಿ. ವಿಶ್ವನಾಥ್ ಇವರ ಪ್ರಕರಣದಲ್ಲಿ ಕೂಡಲೇ ಇಲಾಖಾ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಿತು ಅಲ್ಲದೇ, ಈ ಇಲಾಖಾ ವಿಚಾರಣೆಯ ಅಂತಿಮ ಅಭಿಪ್ರಾಯವನ್ನು ಕಾಯ್ದಿರಿಸಿ ಹಾಗೂ ಮಾನ್ಯ ಲೋಕಾಯುಕ್ತರವರು ಸದರಿ ಪ್ರಕರಣದಲ್ಲಿ ಉನ್ನತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಲ್ಲಿ ಆ ಮೇಲ್ಮನವಿಯಂತೆ ಹೊರ ಬರುವ ನ್ಯಾಯಾಲಯದ ಆದೇಶವನ್ನು ಕಾಯ್ದಿರಿಸಿ ಕೆಲಸಕ್ಕೆ ಪುನರ್ ನೇಮಕ ಮಾಡಿಕೊಳ್ಳಲು ತೀರ್ಮಾನಿಸಿತು.

**ವಿಷಯ ಸಂಖ್ಯೆ:05 (ಆ):** ಶ್ರೀ ಎಲ್. ಹನುಮಯ್ಯ (ಸೇವೆಯಿಂದ ವಜಾಗೊಳಿಸಿರುವ) ದ್ವಿತೀಯ ದರ್ಜೆ ಸಹಾಯಕರು, ಇವರನ್ನು ನ್ಯಾಯಾಲಯದ ತೀರ್ಪಿನಂತೆ ನಿಗಮದ ಸೇವೆಗೆ ಪುನರ್ ನೇಮಿಸಿಕೊಳ್ಳುವ ಬಗ್ಗೆ.

ಶ್ರೀಯುತ ಎಲ್. ಹನುಮಯ್ಯ ಇವರ ಪ್ರಕರಣದಲ್ಲಿ ಕೂಡಲೇ ಇಲಾಖಾ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಿತು. ಅಲ್ಲದೇ, ಈ ಇಲಾಖಾ ವಿಚಾರಣೆಯ ಅಂತಿಮ ಅಭಿಪ್ರಾಯವನ್ನು ಕಾಯ್ದಿರಿಸಿ ಹಾಗೂ ಮಾನ್ಯ ಲೋಕಾಯುಕ್ತರವರು ಸದರಿ ಪ್ರಕರಣದಲ್ಲಿ ಉನ್ನತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಲ್ಲಿ ಆ ಮೇಲ್ಮನವಿಯಂತೆ ಹೊರ ಬರುವ ನ್ಯಾಯಾಲಯದ ಆದೇಶವನ್ನು ಕಾಯ್ದಿರಿಸಿ ಕೆಲಸಕ್ಕೆ ಪುನರ್ ನೇಮಕ ಮಾಡಿಕೊಳ್ಳಲು ತೀರ್ಮಾನಿಸಿತು.

**ವಿಷಯ ಸಂಖ್ಯೆ:06:** ನಿಗಮದ ವಿವಿಧ ಯೋಜನೆಗಳಡಿ ಫಲಾಪೇಕ್ಷಿಗಳ ಆಯ್ಕೆಯ ಕಾಲಮಿತಿ ಬಗ್ಗೆ

ಈ ಸಂಬಂಧ ಆಡಳಿತ ಮಂಡಳಿಯು ಸವಿಸ್ತಾರವಾಗಿ ಚರ್ಚಿಸಿ ಆಯ್ಕೆ ಪ್ರಕ್ರಿಯೆಯಲ್ಲಿ ಮಾನ್ಯ ಶಾಸಕರುಗಳು ಸೇರಿರುವುದರಿಂದ, ಸದರಿ ಆದೇಶವನ್ನು ಸರ್ಕಾರವೇ ಮಾಡಿರುವುದರಿಂದ ಯಾವುದೇ ಬದಲಾವಣೆಯ ಅಗತ್ಯವಿದ್ದಲ್ಲಿ ಸರ್ಕಾರಕ್ಕೆ ಮಾತ್ರ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

Draft 24/x/2013

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ನಿಗಮದ ಮಾನ್ಯ ಅಧ್ಯಕ್ಷರು ಹಾಗೂ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಇತರೆ ಹಾಜರಿದ್ದ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯಲ್ಲಿ (quorum) ಇರುವುದನ್ನು ಖಾತ್ರಿಪಡಿಸಿ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು. ಅಂತೆಯೇ, 197ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ನಿಗಮದ ಅಧ್ಯಕ್ಷರನ್ನು ಕೋರಿದರು. ಅಂತೆಯೇ ನಡೆದ ಸಭೆಯ ವಿಷಯವಾರು ನಡವಳಿ.

**ವಿಷಯ ಸಂಖ್ಯೆ: 01:** 196ನೇ ನಿರ್ದೇಶಕರ ಮಂಡಳಿ ನಡವಳಿ ಅಂಗೀಕರಿಸುವ ಕುರಿತು.

ದಿನಾಂಕ:27.09.2013ರಂದು ನಡೆದ 196ನೇ ನಿರ್ದೇಶಕರ ಮಂಡಳಿಯು ತೆಗೆದುಕೊಂಡ ವಿಷಯವಾರು ತೀರ್ಮಾನದ ನಡವಳಿಯನ್ನು ಸಭೆಯು ಯಥಾವತ್ತಾಗಿ ಅಂಗೀಕರಿಸಿತು. ಮುಂದುವರೆದು, 196ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಂತೆ ಕೈಗೊಂಡ ಕ್ರಮದ ಬಗ್ಗೆ ತಯಾರಿಸಿದ ಅನುಪಾಲನಾ ವರದಿಯನ್ನು ಪರಾಂಭರಿಸಲಾಯಿತು.

**ವಿಷಯ ಸಂಖ್ಯೆ:02:** ನಿಗಮದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಮೋದನೆ ನೀಡುವ ಬಗ್ಗೆ.

ನಿಗಮದ 189ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದಿಸಿದ ವೃಂದ ಮತ್ತು ನೇಮಕಾತಿ ನಿಯಮವನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಮಂಡಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪತ್ರ ಸಂಖ್ಯೆ:ಸಕಇ/154/ಎಸ್‌ಡಿಸಿ/2012 ದಿನಾಂಕ 21.08.2013ರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ಒಪ್ಪಿ ನಿಗಮಕ್ಕೆ ಕಳುಹಿಸಿ ಮುಂದಿನ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ತಿಳಿಸಿತ್ತು. ಅಂತೆಯೇ, ನಿಗಮದ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಆಡಳಿತ ಮಂಡಳಿಯು ಸಂಪೂರ್ಣವಾಗಿ ಅವಲೋಕನ ಮಾಡಿ ಚರ್ಚಿಸಿತು. ಪೂರ್ಣ ಚರ್ಚೆಯ ನಂತರ ಸದರಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಕೆಳಕಂಡ ಒಂದು ಬದಲಾವಣೆಯೊಂದಿಗೆ ಯಥಾವತ್ತಾಗಿ ಅನುಮೋದಿಸಿ, ಕೂಡಲೇ ಜಾರಿಗೆ ಬರುವಂತೆ ನಿಗಮಕ್ಕೆ ಅಳವಡಿಸಿಕೊಳ್ಳಲು ಒಪ್ಪಿತು. [illegible]

"Schedule-II, Statement-I, Sl. No.7. District Manager/Asst. General Manager"

ಈ ಹುದ್ದೆಯ ನೇರನೇಮಕಾತಿಯಲ್ಲಿ ನಿಗದಿಪಡಿಸಲಾಗಿದ್ದ ಎರಡು ವರ್ಷಗಳ work experience ಅರ್ಹತೆಯನ್ನು ಕೈಬಿಡುವುದು.

**ವಿಷಯ ಸಂಖ್ಯೆ:03:** ಗಂಗಾಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಬಾಕಿ ಉಳಿದ 4608 ಕೊಳವೆಬಾವಿಗಳನ್ನು ಪರಿಷ್ಕೃತ ಘಟಕ ವೆಚ್ಚದಂತೆ ಕೊರೆಯುವ ಬಗ್ಗೆ.

ಈ ವಿಷಯವನ್ನು ಸವಿಸ್ತಾರವಾಗಿ ಚರ್ಚಿಸಿದ ಆಡಳಿತ ಮಂಡಳಿಯು ಈ ಕೆಳಕಂಡಂತಹ ತೀರ್ಮಾನಗಳನ್ನು ಮಾಡಿತು.

1) 2008-09ನೇ ಸಾಲಿನಿಂದ 2011-12ನೇ ಸಾಲಿನ ವರೆವಿಗೆ ಕೊರೆಯಲು ಬಾಕಿ ಆಗಿರುವ 4608 ಕೊಳವೆಬಾವಿಗಳನ್ನು 2012-13ನೇ ಸಾಲಿನಲ್ಲಿ ಅಂತಿಮಗೊಳಿಸಲಾಗಿರುವ ಟೆಂಡರ್ ದರಗಳ ಆಧಾರದಂತೆ 2013-14ನೇ ಸಾಲಿನಲ್ಲಿ ಕೊರೆಯಲು ತೀರ್ಮಾನಿಸಲಾಯಿತು. ಹಾಗೂ ವ್ಯತ್ಯಾಸದ ಮೊತ್ತವನ್ನು ನಿಗಮದಲ್ಲಿ ಉಳಿತಾಯವಾಗಿರುವ ಹಾಗೂ 2013-14ನೇ ಸಾಲಿನ ಆಯವ್ಯಯದಲ್ಲಿ ಇರುವ ಸಂಪನ್ಮೂಲಗಳಿಂದ ಹೊಂದಾಣಿಕೆ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.
2) ನಿಗಮದ ವತಿಯಿಂದ ಕಾರ್ಯಾದೇಶ ಪಡೆದು ಕೊಳವೆಬಾವಿ ಕೊರೆಯದೇ ಬಾಕಿ ಮಾಡಿರುವ ಗುತ್ತಿಗೆದಾರರುಗಳ ಮೇಲೆ ಟೆಂಡರ್ ನಿಯಮಾವಳಿಗಳಂತೆ ಹಾಗೂ ಚಾಲ್ತಿ ಕಾನೂನಿನನ್ವಯ ಶಿಸ್ತು ಕ್ರಮಕೈಗೊಳ್ಳುವುದು.

Draft [illegible] 24/X/2013